# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 16 ಫ್ರಾ.ಸಾ. :50**

| | | |
|---|---|---|
| ಸಾಕ್ಷಿಯ ಹೆಸರು | : | ವಿಶ್ವನಾಥ ಸಿದ್ಧ ಉಳ್ವೇಕರ್ |
| ತಂದೆಯ ಹೆಸರು | : | ಸಿದ್ಧ ಉಳ್ವೇಕರ್ |
| ವಯಸ್ಸು | : | 51 ವರ್ಷ |
| ಕೆಲಸ | : | ಮೀನುಗಾರಿಕೆ |
| ವಾಸ | : | ಕೋಡಿಭಾಗ್, ಕಾರವಾರ |

**ದಿನಾಂಕಃ 21-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಈಗ ಸುಮಾರು 4-5 ವರ್ಷಗಳ ಹಿಂದೆ, ಒಂದು ದಿನ ಮಧ್ಯರಾತ್ರಿ ಕಾರವಾರ ನಗರ ಠಾಣೆಯ ಪೊಲೀಸರು ನನಗೆ ಠಾಣೆಗೆ ಬರುವಂತೆ ಫೋನು ಮಾಡಿದ್ದರು. ಅದರಂತೆ ನಾನು ಅಲ್ಲಿಗೆ ಹೋದಾಗ, ಚಾಸಾ-15 ರವರೂ ಸಹ ಅಲ್ಲಿಗೆ ಬಂದಿದ್ದರು. ಅಲ್ಲಿ ನಮ್ಮನ್ನು ಒಂದು ಕಡೆ ನಿಲ್ಲಿಸಿ, ಒಂದು ಬ್ಯಾಗನ್ನು ಪರಿಶೀಲಿಸುತ್ತಿದ್ದರು. ಸದರಿ ಬ್ಯಾಗಿನಲ್ಲಿ ಏನಿತ್ತು ಎಂದು ನಾನು ನೋಡಿರಲಿಲ್ಲ. ನಂತರ ಪೊಲೀಸರು ಒಂದು ಬಿಳಿ ಹಾಳೆಯಲ್ಲಿ ನಮ್ಮ ಸಹಿಯನ್ನು ಪಡೆದುಕೊಂಡರು. ನಿಪಿ-62 ಅಂಗ ಜಪ್ತುಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ-62(ಸಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಪಿ-63 ರಂತೆ ಫೋಟೊ ತೆಗೆದರು, ಸದರಿ ಫೋಟೊವನ್ನು ನೋಡಿ ಸಾಕ್ಷಿಯು, ಅದರಲ್ಲಿ ತಾನು, ಚಾಸಾ-15, ಪೊಲೀಸರು ಹಾಗೂ ಇನ್ನೊಬ್ಬ ವ್ಯಕ್ತಿ ಇರುವುದಾಗಿ ನುಡಿಯುತ್ತಾರೆ. ಇನ್ನೊಬ್ಬ ವ್ಯಕ್ತಿ ಎಂದು ಗುರುತಿಸಲಾದ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದೆ ಇರುತ್ತಾರೆಯಾ? ಎಂದು ಸರಕಾರಿ ಅಭಿಯೋಜಕರು ಕೇಳಿದ ಪ್ರಶ್ನೆಗೆ ಸಾಕ್ಷಿಯು, ಇಲ್ಲ ಎಂದು ನುಡಿಯುತ್ತಾರೆ. ನಿಪಿ-64 ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಲು ಸಾಕ್ಷಿಯು ನಿರಾಕರಿಸಿರುತ್ತಾರೆ. ನಿಪಿ-65 ರಿಂದ ನಿಪಿ-70 ರಲ್ಲಿರುವ ಸಹಿಗಳನ್ನೂ ಸಹ ಸಾಕ್ಷಿಯು ಗುರುತಿಸಲು ನಿರಾಕರಿಸಿರುತ್ತಾರೆ. (ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯ ಮಾದರಿ

ಸಹಿಗಳನ್ನು ಪಡೆಯಲು ಅನುಮತಿ ಕೋರಿದ್ದು, ಸಾಕ್ಷಿಯ ಹೇಳಿಕೆಯನ್ನು ಗಮನಿಸಿ, ಅನುಮತಿಸಲಾಯಿತು. ಅದರಂತೆ, ಸರಕಾರಿ ಅಭಿಯೋಜಕರು ಸಾಕ್ಷಿಯಿಂದ ಒಟ್ಟು 10 ಸಹಿಗಳನ್ನು ಪಡೆದುಕೊಂಡಿರುತ್ತಾರೆ.) ಸಾಕ್ಷಿಯು ಸಹಿ ಮಾಡಿದ ಹಾಳೆಯನ್ನು ನಿಪಿ-127 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ವಸ್ತುಗಳನ್ನು ಜಪ್ತುಪಡಿಸಿಕೊಂಡ ಬಗ್ಗೆ ನನಗೆ ನೆನಪಿಲ್ಲ. ಈ ಹಂತದಲ್ಲಿ ಸಾಕ್ಷಿಯು ತಾನು ನಿದ್ದೆಯಲ್ಲಿದ್ದ ಕಾರಣ, ಪೊಲೀಸರು ಠಾಣೆಯಲ್ಲಿ ಏನು ಮಾಡಿದರು ಹಾಗೂ ಪೊಲೀಸರೊಂದಿಗೆ ಇದ್ದ ವ್ಯಕ್ತಿ ಯಾರು ಎಂದು ನಾನು ಗಮನಿಸಿರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸರಕಾರಿ ಅಭಿಯೋಜಕರು ಮನೆಯಿಂದ ಠಾಣೆಗೆ ಹೇಗೆ ಬಂದಿರಿ ಎಂದು ಕೇಳಿದಾಗ, ಸಾಕ್ಷಿಯು ತಾನು ಬೈಕಿನಲ್ಲಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-</u>**

2. ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಬೋಟಿನಲ್ಲಿ ಮೀನುಗಾರಿಕೆ ಮಾಡುತ್ತೇನೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ ಮತ್ತು ಹಣಕಾಸಿನ ವ್ಯವಹಾರ ಹಾಗೂ ಅದಕ್ಕೆ ಸಂಬಂಧಿಸಿದ ಕಾಗದ ಪತ್ರ ವ್ಯವಹಾರ ಮಾಡುವಾಗ ಸಹಿ ಹಾಕುವ ಬಗ್ಗೆ ನನಗೆ ತಿಳಿದಿರುತ್ತದೆ. ಯಾವುದಾದರೂ ಕಾಗದ ಪತ್ರಕ್ಕೆ ಸಹಿ ಮಾಡುವ ಸಂದರ್ಭ ಬಂದಾಗ, ಅದನ್ನು ಓದಿ ಸಹಿ ಮಾಡುತ್ತೇನೆ ಹಾಗೂ ಸತ್ಯವಾದ ವಿಷಯಗಳಿಗೆ ಸಹಿ ಮಾಡುತ್ತೇನೆ.

3. ಪೊಲೀಸರು ನನಗೆ ಠಾಣೆಗೆ ಕರೆದಾಗ ದಿ.04-12-2018 ಆಗಿತ್ತು ಎಂದರೆ ನೆನಪಿಲ್ಲ. ಆದಿನ 1ನೇ ಆರೋಪಿ ಠಾಣೆಯಲ್ಲಿ ಹಾಜರಿದ್ದ ಎಂದರೆ ನಾನು ನೋಡಿರುವುದಿಲ್ಲ. ಆ ಸಮಯದಲ್ಲಿ 1 ನೇ ಆರೋಪಿಯು ಬಿಳಿ ಬಣ್ಣದ ಟಿ ಶರ್ಟ್ ಮತ್ತು ನೀಲಿ ಬಣ್ಣದ ಜೀನ್ಸ್ ಧರಿಸಿದ್ದ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ಪೊಲೀಸರು 1 ನೇ ಆರೋಪಿಯ ಅಂಗಜಪ್ತು ಮಾಡಲಾಗಿ, ಆತನ ಪ್ಯಾಂಟಿನ ಹಿಂಬದಿಯ ಕಿಸೆಯಲ್ಲಿ ಒಂದು ಕಪ್ಪು ಬಣ್ಣದ ಪರ್ಸ್ ಸಿಕ್ಕಿದ್ದು, ಅದು ಲಿವೈಸ್ ಕಂಪನಿಯದ್ದಾಗಿತ್ತು ಎಂದರೆ ನಾನು ನೋಡಿಲ್ಲ. ಸದರಿ ಪರ್ಸ್ ನಲ್ಲಿ ಸುಮಾರು 15 ರೈಲ್ವೇ ಟಿಕೇಟುಗಳು, ಒಂದು ಎಸ್.ಬಿ.ಐ. ನ ಡೆಬಿಟ್ ಕಾರ್ಡ್, ರೂ.1,470/- ನಗದು ಹಣ, ಎನ್.ಸಿ.ಎಲ್.ಎಲ್. ಎಂದು ಬರೆದಿರುವ ಒಂದು ಸಿಮ್ ಕಾರ್ಡ್

ಇದ್ದವು. ನಂತರ ಸದರಿ ಪ್ಯಾಂಟಿನ ಇನ್ನೊಂದು ಕಿಸೆಯಲ್ಲಿ ನೋಕಿಯಾ ಮೊಬೈಲ್ ಸಿಕ್ಕಿರುತ್ತದೆ. ಆನಂತರ 1 ನೇ ಆರೋಪಿಯ ಬಳಿ ಇದ್ದ ಬ್ಯಾಗನ್ನು ಪರಿಶೀಲಿಸಲಾಗಿ, ಅದು ನೀಲಿ ಬಣ್ಣದ ಟ್ರಾಲಿ ಬ್ಯಾಗ್ ಆಗಿದ್ದು, ಅದನ್ನು ತೆರೆದು ನೋಡಿದಾಗ ಅದರಲ್ಲಿ, ತಿಳಿ ಗುಲಾಬಿ ಬಣ್ಣದ ಒಂದು ಶರ್ಟ್, ನೀಲಿ ಬಣ್ಣದ ಒಂದು ಪ್ಯಾಂಟ್, ಬಿಳಿ ಬಣ್ಣದ ಚೌಕಳಿ ಇರುವ ಒಂದು ಲುಂಗಿ, western money ಎಂದು ಬರೆದಿದ್ದ ಒಂದು ರಶೀದಿ, 1 ನೇ ಆರೋಪಿಯ ಹೆಸರಿನಲ್ಲಿದ್ದ ಡ್ರೈವಿಂಗ್ ಲೈಸೆನ್ಸ್, ಆಧಾರ ಕಾರ್ಡ್, ಬಂಗಾರದ ಬಣ್ಣದ ಸ್ಯಾಮ್‌ಸಂಗ್ ಮೊಬೈಲ್, ಅದರ ಚಾರ್ಜರ್ ಇದ್ದು, ಅವುಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಪಂಚನಾಮೆಯನ್ನು ಗಣಕೀಕರಿಸಿ ನಂತರ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಬಿಳಿ ಹಾಳೆಯಲ್ಲಿ ನನ್ನ ಸಹಿ ಪಡೆದುಕೊಂಡರು ಎಂದು ನುಡಿಯುತ್ತಾರೆ. ಅದೇ ಸಮಯದಲ್ಲಿ ನಿಪಿ–63 ಫೋಟೊ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಫೋಟೋದಲ್ಲಿ ಈಗ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯೂ ಸಹ ಇರುತ್ತಾನೆ ಎಂದರೆ, ಸಾಕ್ಷಿಯು ನನಗೆ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

4. ಆನಂತರ ಜಪ್ತುಪಡಿಸಿಕೊಂಡ ರೈಲ್ವೇ ಟಿಕೇಟುಗಳು ಅಳಿಸಿ ಹೋಗಬಹುದು ಎಂಬ ಕಾರಣದಿಂದ ಪೊಲೀಸರು ಅವುಗಳನ್ನು ಒಂದು ಬಿಳಿ ಹಾಳೆಗೆ ಅಂಟಿಸಿ, ಅದರ ಜೆರಾಕ್ಸ್ ಪ್ರತಿಯನ್ನು ಮಾಡಿ, ಅವುಗಳ ಮೇಲೆ ಸಹಿ ಪಡೆದು, ನಂತರ ಅವುಗಳನ್ನು ಜಪ್ತುಪಡಿಸಿಕೊಳ್ಳುವ ಸಂಬಂಧ ಪಂಚನಾಮೆ ಮಾಡಿ ನಿಪಿ–64 ರಿಂದ 70 ರವರೆಗೆ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರೂ ಹಾಗೂ ಅವುಗಳಿಗೆ ನಾನು ಸಹಿ ಮಾಡಿದ್ದರೂ ಸಹ, ಹಾಗೂ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದರೂ ಸಹ, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–</u>**

5. ಆ ದಿನ ಠಾಣೆಯಲ್ಲಿ ನನ್ನೊಂದಿಗೆ ಚಾಸಾ–15 ರವರೂ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ಪೊಲೀಸರನ್ನು ಕಂಡರೆ ನನಗೆ ಭಯವಾಗುತ್ತದೆ. ಆ ಕಾರಣ, ನಾನು ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ. ನಿಪಿ–63 ಫೋಟೊವನ್ನು ಪೊಲೀಸರು ಯಾವ ಕಾರಣಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಈ ದಿನ ನ್ಯಾಯಾಲಯದಲ್ಲಿ 2 ಮತ್ತು 3 ನೇ ಆರೋಪಿತರ ಪರ ವಕೀಲರು ಹಾಜರಿಲ್ಲದ ಕಾರಣ, 2 ಮತ್ತು 3 ನೇ ಆರೋಪಿತರು ಸ್ವತಃ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಈ ದಿನ ನ್ಯಾಯಾಲಯದಲ್ಲಿ 5 ನೇ ಆರೋಪಿ ಪರ ವಕೀಲರು ಹಾಜರಿಲ್ಲದ ಕಾರಣ, 5 ನೇ ಆರೋಪಿಯು ಸ್ವತಃ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
**Sd/-**
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.